**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 277 / 2018**

| | | |
|---|---|---|
| ಸಾಕ್ಷಿಯ ಹೆಸರು | : ಪೂರ್ಣಿಮಾ | |
| ಗಂಡನ ಹೆಸರು | : ಷಣ್ಮುಗಚಾರಿ | |
| ವಯಸ್ಸು | : 51 ವರ್ಷ | |
| ಉದ್ಯೋಗ | : ಗೃಹಿಣಿ | ಚಾಸಾ –4 |
| ವಾಸ ಸ್ಥಳ | : ಕೊಳ್ಳೇಗಾಲ | ಪ್ರಾಸಾ –4 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 11.06.2025**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ಚಾಸಾ 1, 2 ಮತ್ತು 3 ರವರು ನಮ್ಮ ಪಕ್ಕದ ಮನೆಯವರು. ಸಾಕ್ಷಿಗೆ ನಿಪಿ–2 ಮಹಜರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ–2(ಸಿ) ಎಂದು ಗುರುತಿಸಲಾಯಿತು. ದಿನಾಂಕಃ 03.11.2016 ರಂದು ಚಾಸಾ 2 ರವರ ಮನೆಮುಂದೆ ಚಾಸಾ 1 ರವರು ಸಂಜೆ ಸುಮಾರು 7.00 – 7.30 ರ ಸಮಯದಲ್ಲಿ ಅಂಗಡಿಗೆ ಹೋಗಿ ಬರುವಾಗ ಬೈಕಿನಲ್ಲಿ ಬಂದು ಮಾಂಗಲ್ಯ ಚೈನನ್ನು ಕಿತ್ತುಕೊಂಡು ಹೋಗಿದ್ದು ಅದರಂತೆ ಒಂದು ವಾರಗಳ ನಂತರ ಪೋಲಿಸರು ಮಹಜರು ಸಲುವಾಗಿ ಬಂದಿದ್ದು ಮಹಜರು ಕಾಲದಲ್ಲಿ ನಿಪಿ–2ಕ್ಕೆ ಸಹಿ ಮಾಡಿರುತ್ತೇನೆ. ಆಗ ಸಮಯ ಬೆಳಿಗ್ಗೆ 11.00 ರಿಂದ 12.00 ಗಂಟೆಯಾಗಿತ್ತು. ಮಹಜರು ಕಾಲದಲ್ಲಿ ನಾನು, ಚಾಸಾ 1 ಮತ್ತು ಚಾಸಾ 2 ರವರು ಹಾಜರಿದ್ದೆವು.

**ಪಾಟೀ ಸವಾಲು – 3ನೇ ಆರೋಪಿ ಪರ ವಕೀಲರಿಂದ**

ಮಹಜರಿಗೆ ಬರಲು ನನಗೆ ಪೋಲಿಸರು ನೋಟಿಸ್ ಕೊಟ್ಟು ಕರೆಸಿರುವುದಿಲ್ಲ. ಈ ಕೇಸಿಗೆ ಸಂಬಂಧಪಟ್ಟಂತೆ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ. ನಿಪಿ2ನ್ನು ನನ್ನ ಮುಂದೆ ಬರೆದಿರುವುದಿಲ್ಲ ಬರೆದು ತಂದಿರುವುದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಚಾಸಾ 1 ರವರು ನನ್ನ ಪಕ್ಕದ ಮನೆಯವರು ನನ್ನ ಸಂಬಂಧಿಕರಲ್ಲ. ನನಗೆ ಈ ಕೇಸಿನ ಬಗ್ಗೆ ಏನೂ ಗೊತ್ತಿರದಿದ್ದರೂ ಚಾಸಾ 1 ರವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.